## ನಿಮ್ಮೊಡನೆ

# ಭಿಕ್ಷುಕರೇಕೆ ಹುಟ್ಟುತ್ತಾರೆ?

> ಒಂದೆಡೆ, ಸಾಧನೆಯ ಸಮಾವೇಶದ ಸಂಭ್ರಮದಲ್ಲಿ ಮುಳುಗಿರುವ ಸರಕಾರ; ಪಾದಯಾತ್ರೆಯ ಯಶಸ್ಸಿನಿಂದ ಬೀಗುತ್ತಿರುವ ವಿರೋಧಪಕ್ಷಗಳು– ಇನ್ನೊಂದೆಡೆ ಕುಟುಂಬದಿಂದ ಪರಿತ್ಯಕ್ತರಾಗಿ ಸರ್ಕಾರದ ಆಶ್ರಯ ಪಡೆದರೂ ಜೀವ ಉಳಿಸಿಕೊಳ್ಳಲಾಗದೆ ಅನಾಥರಾಗುತ್ತಿರುವ ನಿರಾಶ್ರಿತರು! ನಮ್ಮ ಹೆಮ್ಮೆಯ ಕರ್ನಾಟಕ ಎತ್ತ ಸಾಗುತ್ತಿದೆ?



ಬೆಂಗಳೂರಿನ ನಿರಾಶ್ರಿತರ ಪುನರ್ವಸತಿ ಕೇಂದ್ರ ಒಮ್ಮಿಂದೊಮ್ಮೆಲೆ ಸುದ್ದಿಯ ಆಗರವಾಗಿದೆ. ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಸಾವಿರಾರು ನಿರಾಶ್ರಿತರಲ್ಲಿ 20 ಜನ ಎರಡೇ ದಿನಗಳಲ್ಲಿ ಸಾವನ್ನಪ್ಪಿದ್ದು ಮಾಧ್ಯಮಗಳ ಮೂಲಕ ಬಯಲಾಗಿ ಇಡೀ ಸಮಾಜ ಬೆಚ್ಚಿ ಬಿದ್ದಿದೆ. ಸುದ್ದಿಯ ಬೆನ್ನು ಹತ್ತಿರುವ ಪತ್ರಕರ್ತರು ಒಂದಕ್ಕಿಂದ ಒಂದು ದಾರುಣವಾದ ಸತ್ಯಗಳನ್ನು ಹೊರಗೆ ತಂದಿದ್ದಾರೆ. ಲೆಕ್ಕ ಹಾಕಿದರೆ ಈ ನಿರಾಶ್ರಿತರ ಶಿಬಿರದಿಂದ ಪ್ರತಿ ದಿನವೂ ಕನಿಷ್ಠ ಎರಡು ಹೆಣಗಳು ಸ್ಮಶಾನಕ್ಕೆ ಹೋಗುತ್ತಿವೆ ಎನ್ನುವುದು ಗೊತ್ತಾಗಿದೆ. ಕಳೆದ ಎಂಟೂವರೆ ತಿಂಗಳಲ್ಲಿ 305ಕ್ಕೂ ಹೆಚ್ಚು ನಿರಾಶ್ರಿತರು ಇಲ್ಲಿ ಸಾವನ್ನಪ್ಪಿದ್ದಾರೆ ಎಂಬ ಭಯಾನಕ ವಿವರ ಬಯಲಾಗಿದೆ. ಅದರಲ್ಲೂ ಆಗಸ್ಟ್ ತಿಂಗಳ ಮೊದಲ 19 ದಿನಗಳಲ್ಲಿ ಸತ್ತವರ ಸಂಖ್ಯೆ 105 ದಾಟಿದೆ ಎಂದರೆ, ಎಂತಹ ದಯನೀಯ ಸ್ಥಿತಿಯಲ್ಲಿ ಈ ನಿರಾಶ್ರಿತರು ಬದುಕಿದ್ದರು ಎನ್ನುವುದು ಗೊತ್ತಾಗುತ್ತದೆ. ಅತ್ಯಂತ ಗಲೀಜು ವಸತಿ, ಕೊಳಕು ಆಹಾರ, ವೃದ್ಧಾಪ್ಯದಲ್ಲಿ ಅತೀ ಅಗತ್ಯವಾದ ವೈದ್ಯಕೀಯ ಸೌಲಭ್ಯಗಳ ಕೊರತೆ ಹಾಗೂ ಸಿಬ್ಬಂದಿಯ ಕ್ರೌರ್ಯ– ಎಲ್ಲವೂ ಸೇರಿ ಈ ಸಾವುಗಳು ಸಂಭವಿಸಿವೆ ಎನ್ನುವುದು ಸ್ಪಷ್ಟ. ಒಂದೆಡೆ, ಸಾಧನೆಯ ಸಮಾವೇಶದ ಸಂಭ್ರಮದಲ್ಲಿ ಮುಳುಗಿರುವ ಸರಕಾರ; ಪಾದಯಾತ್ರೆಯ ಯಶಸ್ಸಿನಿಂದ ಬೀಗುತ್ತಿರುವ ವಿರೋಧಪಕ್ಷಗಳು– ಇನ್ನೊಂದೆಡೆ ಕುಟುಂಬದಿಂದ ಪರಿತ್ಯಕ್ತರಾಗಿ ಸರಕಾರದ ಆಶ್ರಯ ಪಡೆದರೂ ಜೀವ ಉಳಿಸಿಕೊಳ್ಳಲಾಗದೆ ಅನಾಥರಾಗುತ್ತಿರುವ ನಿರಾಶ್ರಿತರು! ನಮ್ಮ ಹೆಮ್ಮೆಯ ಕರ್ನಾಟಕ ಎತ್ತ ಸಾಗುತ್ತಿದೆ?

ಭಿಕ್ಷುಕರ ಕೇಂದ್ರದ ಈ ದುರಂತ ಚಿತ್ರಣ ಹೆಚ್ಚುತ್ತಿರುವ ನಗರೀಕರಣ ಮತ್ತು ಬಡವಾಗುತ್ತಿರುವ ಹಳ್ಳಿಗಳ ಕಡೆಯೂ ಗಮನ ಸೆಳೆಯುತ್ತದೆ. ನಗರ, ಅದರಲ್ಲೂ ರಾಜಧಾನಿ ನಗರ ಎಂದರೆ ನಮ್ಮೆಲ್ಲ ಸೌಭಾಗ್ಯಗಳ ಸಂಕೇತ! ಇಲ್ಲಿರುವ ಹೇಮಾಮಾಲಿನಿಯ ಕೆನ್ನೆಯಂತಹ ನುಣುಪಾದ ರಸ್ತೆಗಳು, ಮೊಸಾಯಿಕ್ ಫುಟ್‌ಪಾತ್‌ಗಳು, ಫಳಫಳನೆ ಹೊಳೆಯುವ ಗಾಜಿನ ಅದ್ಭುತ ಕಟ್ಟಡಗಳು, ಮೇಲುಸೇತುವೆಗಳು– ಎಲ್ಲವೂ ನಗರಗಳ ಪ್ರಗತಿಯ ಸಂಕೇತ. ಅಂತಹ ನಗರಗಳಲ್ಲಿ ಭಿಕ್ಷುಕರು ಅಡ್ಡಾಡುವುದೆಂದರೆ ಅದು ನಾಗರಿಕತೆಗೇ ಕಳಂಕ! ಹಾಗಾಗಿ ರಸ್ತೆ ಬದಿಯಲ್ಲಿ ಕಾಣಿಸುವ ಭಿಕ್ಷುಕರನ್ನು ಎತ್ತಿ ಕೊಂಡೊಯ್ದು ನಿರಾಶ್ರಿತರ ಶಿಬಿರದಲ್ಲಿ ಸಾಕಬೇಕು– ಇದು ಸರಕಾರದ ಧೋರಣೆ. ಒಳ್ಳೆಯದೇ. ದುಡಿಯಲು ಸಾಧ್ಯವಿಲ್ಲದ, ವೃದ್ಧಾಪ್ಯದಿಂದ ಸೊರಗಿರುವ, ಕುಟುಂಬದ ಆಸರೆ ತಪ್ಪಿರುವವವರನ್ನು ಸಾಯುವವರೆಗೆ ಚೆನ್ನಾಗಿ ನೋಡಿಕೊಳ್ಳುವುದು ಸಮಾಜವಾದಿ ವ್ಯವಸ್ಥೆಯಲ್ಲಿ ಸರಕಾರದ ಸಾಮಾಜಿಕ ಜವಾಬ್ದಾರಿಯ ಒಂದು ಭಾಗವೇ ಸರಿ. ಆದರೆ ಸರಕಾರಿ ವ್ಯವಸ್ಥೆ ಎಷ್ಟೊಂದು ಕ್ರೂರವಾಗಿದೆ ಎಂದರೆ, ಆಸ್ಪತ್ರೆಗೆ ಚಿಕಿತ್ಸೆಗೆ ಬಂದು ಫುಟ್‌ಪಾತ್‌ನಲ್ಲಿ ಕುಳಿತ ಎಷ್ಟೋ ಮಂದಿ ಹಳ್ಳಿಗರನ್ನೂ ಎತ್ತಿ ನಿರಾಶ್ರಿತರ ಶಿಬಿರಕ್ಕೆ ಒಯ್ಯಲಾಗಿದೆ! ಅಲ್ಲಿ ಅವರು ‘ತಾವು ಭಿಕ್ಷುಕರಲ್ಲ’ ಎಂದು ವಾದ ಮಾಡಿದರೆ ಥಳಿಸಿ, ಕೋಣೆಯಲ್ಲಿ ಕೂಡಿ ಹಾಕಿ ಬಾಯಿ ಮುಚ್ಚಿಸಲಾಗಿದೆ! ಬಹುಶಃ ಸಾವು ಹೀಗೆ ಒಮ್ಮೆಲೆ ಮೈಮೇಲೆರಗಿ ಇಪ್ಪತ್ತಕ್ಕೂ ಹೆಚ್ಚು ನಿರಾಶ್ರಿತರನ್ನು ಒಮ್ಮೆಲೆ ಕೊಂಡೊಯ್ದದ್ದು ಅಲ್ಲವಾಗಿದ್ದಲ್ಲಿ, ಈ ನಿರಾಶ್ರಿತರ ಕೇಂದ್ರದ ಭಯಾನಕ ಸತ್ಯಗಳು ಹೊರಸಮಾಜಕ್ಕೆ ಗೊತ್ತೇ ಆಗುತ್ತಿರಲಿಲ್ಲ!

ಅಷ್ಟಕ್ಕೂ ನಗರಗಳಲ್ಲಿ ಭಿಕ್ಷುಕರೇಕೆ ಹೆಚ್ಚಾಗುತ್ತಿದ್ದಾರೆ? ಹಳ್ಳಿಗಳಲ್ಲಿ ಹೆಚ್ಚುತ್ತಿರುವ ಬಡತನದಿಂದಾಗಿ ನಗರಗಳಿಗೆ ಆಗುತ್ತಿರುವ ಹಳ್ಳಿಗರ ವಲಸೆ ಮಾತ್ರ ಇದಕ್ಕೆ ಕಾರಣವೆ? ಅಥವಾ ನಗರೀಕರಣದ ಭರದಲ್ಲಿ ಛಿದ್ರವಾಗುತ್ತಿರುವ ಕುಟುಂಬ ವ್ಯವಸ್ಥೆಯೂ ಕಾರಣವೆ? ಹಿಂದಿನಂತೆ ಅವಿಭಕ್ತ ಕುಟುಂಬಗಳು ಇವತ್ತು ಬಾಳಿಕೆ ಬರುತ್ತಿಲ್ಲ ಎನ್ನುವುದು ವಾಸ್ತವ. ಮದುವೆಯಾದ ಮರುದಿನವೇ ಹೊಸ ಮನೆಗೆ ಹೋಗುವ ಮದುಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ಹೆತ್ತವರನ್ನು, ಹಿರಿಯರನ್ನು ಜತೆಗಿಟ್ಟು ಸಾಕುವ ಆರ್ಥಿಕ ಸಾಮರ್ಥ್ಯ ಇದ್ದ ಮಕ್ಕಳೂ, ಇವತ್ತು ಹಿರಿಯರನ್ನು ಹೊರೆ ಎಂದೇ ಭಾವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಭೋಗಜಗತ್ತು ಹುಟ್ಟುಹಾಕಿರುವ ಐಶಾರಾಮದ ಕಲ್ಪನೆಯೂ ಹಿರಿಯರು ಮತ್ತು ಕಿರಿಯರ ನಡುವಣ ಕಂದರವನ್ನು ಹೆಚ್ಚು ಮಾಡಿದೆ. ಬಡತನ, ಅಸೌಖ್ಯ, ಖಿನ್ನತೆ– ಹೀಗೆ ಕಾರಣಗಳು ಏನೇ ಆಗಿರಲಿ, ಕುಟುಂಬದಿಂದ ಬೇರೆಯಾದ ಹಿರಿಯರನ್ನು ಸೌಜನ್ಯದಿಂದ ನಡೆಸಿಕೊಳ್ಳಬೇಕಾದ ಹೊಣೆಗಾರಿಕೆ ಕಿರಿಯರದ್ದು. ಅದನ್ನು ‘ಸರಕಾರದ ಹೊಣೆ’ ಎಂದು ಭಾವಿಸುವುದೂ ಸರಿಯಲ್ಲ. ಹಾಗೆ ಭಾವಿಸಿದಾಗೆಲ್ಲ ‘ಭಿಕ್ಷುಕರ ಕೇಂದ್ರ’ದಂತಹ ದುರಂತಗಳು ಸಂಭವಿಸುತ್ತವೆ. ಸಾಕಬೇಕಾದ ಕಿರಿಯರೇ ತಮ್ಮ ನೈತಿಕತೆಯನ್ನು ಕಳೆದುಕೊಂಡು ಹೆತ್ತವರನ್ನು ಬೀದಿಪಾಲು ಮಾಡುವ ಸಮಾಜದಲ್ಲಿ, ‘ಹೃದಯವಿಲ್ಲದ ಸರಕಾರಿ ವ್ಯವಸ್ಥೆ’ಯಿಂದ ಅಂತಹ ನೈತಿಕತೆಯನ್ನು ನಿರೀಕ್ಷಿಸುವುದೂ ತಪ್ಪಾಗುತ್ತದೆ.

■ ಬಿ.ಎಂ. ಹನೀಫ್